embankment and also aided by the use of all kinds of soil" ಎಂದು ತಿಳಿಸಿರುತ್ತಾರೆ.

ಊ) ಕಾಲುವೆಯಲ್ಲಿ ಪ್ರಸ್ತುತದಲ್ಲಿ ಯಾವುದೇ ತೊಂದರೆ ಇಲ್ಲದ ಕಾರಣ ಯಾವುದೇ ತಜ್ಞರ ಸಮಿತಿ ರಚಿಸುವ ಪ್ರಮೇಯ ಉದ್ಭವಿಸುವುದಿಲ್ಲ. ಆದರೆ, ಅಕ್ಟೋಬರ್ 2003 ರಲ್ಲಿ ಸದರಿ ನಾಲೆಯಲ್ಲಿ ದೋಷವನ್ನು ಸರಿಪಡಿಸಲು ಶ್ರೀ ಕೆ.ಸಿ. ರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಶ್ರೀ. ಡಿ.ಎನ್. ದೇಸಾಯಿ, ಶ್ರೀ ಹೆಚ್.ಎಸ್.ಭಟ್, ಶ್ರೀ ಹೆಚ್.ಎಸ್. ಚಿನಿವಾಲ್, ಶ್ರೀ ಬಿ.ಎಂ. ರಾಮೇಗೌಡ, ಪ್ರೋ:ಎ. ಶ್ರೀಧರನ್ (I.I.Sc.), ಪ್ರೋ.ಕೆ.ಎಸ್. ಸುಬ್ಬಾರಾವ್ (I.I.Sc.), ಕ್ಯಾ:ಎಸ್. ರಾಜಾರಾವ್, ಶ್ರೀ ವ್ಹಿ.ಜಿ. ಬೆಲ್ಲದ್, ಶ್ರೀ ಎಸ್.ಜಿ. ಕೊಯಮತ್ತೂರ್, ಶ್ರೀ ಎಸ್.ಎಸ್. ಮಗದಾಳ್ ಹಾಗೂ ಶ್ರೀ ಟಿ.ರಾಮಅಯ್ಯಂಗಾರ್ ಇವರುಗಳನ್ನೊಳಗೊಂಡ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು.

ಋ) ಸಮಿತಿಯು ತನ್ನ ವರದಿಯನ್ನು ಸಲ್ಲಿಸಿರುತ್ತದೆ. ಹಾಗೂ ವರದಿಯ ಪ್ರತಿಯನ್ನು ಲಗತ್ತಿಸಲಾಗಿದೆ.

ಋ) ಮೊದಲೆರಡು ಬಾರಿ ಉಂಟಾದ ಬಿರುಕಿನ ಚೈನೇಜ್ ನಲ್ಲಿ ನೆಲಮಟ್ಟದಿಂದ 3ಮೀ ಮಣ್ಣನ್ನು ತೆಗೆದು ಅದರ ಮೇಲೆ ಉತ್ತಮ ಗುಣಮಟ್ಟದ ಗ್ರಾವೆಲ್ ನ್ನು ಹಾಕಿ ಅದರ ಮೇಲೆ ಕಲ್ಲು ಮಿಶ್ರಿತ ಮಣ್ಣನ್ನು ಹಾಕಿ ನಂತರ ಏರಿ ಭಾಗದ 'ಎ' ವಲಯ ಮತ್ತು 'ಜಿ' ವಲಯದ ನಡುವ 0.990 ಮೀ ಪಿಲ್ಟರ್ ಮೀಡಿಯವನ್ನು ಅಳವಡಿಸಿ ನಂತರ 1:3 ಎತ್ತರದ ಏರಿ ಭಾಗಕ್ಕೆ ರಾಕ್‌ಟೋ ಅನ್ನು ನಿರ್ಮಿಸಿ 4 ಮೀ ಏರ್ಮನ್ನು. ಹಾಕಿ ಕಾಮಗಾರಿಯನ್ನು ಪೂರ್ಣಗೊಳಿಸಲಗಿರುತ್ತದೆ.

ಋ) 1984 ರಲ್ಲಿ ರೂ. 35 ಲಕ್ಷ ಖರ್ಚು ಮಾಡಲಾಗಿದೆ.
1994 ರಲ್ಲಿ ರೂ. 100 ಲಕ್ಷ ಖರ್ಚು ಮಾಡಲಾಗಿದೆ.

249 (5) : ಶ್ರೀ ಜಯಪ್ರಕಾಶ್ ಹೆಗ್ಡೆ.ಕೆ. (ಬ್ರಹ್ಮಾವರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ನಿರ್ಮಾನ ಹಂತದಲ್ಲಿರುವ ಮೇಲು ಸೇತುವೆಗಳೆಷ್ಟು; ಸಂಪೂರ್ಣ ವಿವರಗಳನ್ನು ನೀಡುವುದು;

ಆ) ಕೆಲವು ಮೇಲು ಸೇತುವೆಗಳ ನಿರ್ಮಾಣ ಕಾರ್ಯದ ವಿಳಂಬದಿಂದಾಗಿ ಸಂಚಾರದ ಅವ್ಯವಸ್ಥೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡಿರುವ ಕ್ರಮಗಳು ಯಾವುವು;

ಈ) ಮೇಲು ಸೇತುವೆ ನಿರ್ಮಾಣ ಕಾರ್ಯಕ್ಕೆ ನೀಡಿರುವ ಹಣವೆಷ್ಟು ಹಾಗೂ ಮೇಲು ಸೇತುವೆಗಳ ನಿರ್ಮಾಣ ಕಾಮಗಾರಿಗಳು ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) I) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 3 ಮೇಲು ಸೇತುವೆಗಳನ್ನು ನಿರ್ಮಿಸುತ್ತಿದ್ದು, ಅವುಗಳ ವಿವರ ಕೆಳಕಂಡಂತೆ ಇದೆ:-

(1) ಏರ್‌ಪೋರ್ಟ್ ರಸ್ತೆ-ಒಳವರ್ತುಲ ರಸ್ತೆ ಕೊಡುವಿಕೆ
(2) ಜಯದೇವ ಹೃದ್ರೋಗ ಕೇಂದ್ರದ ಬಳಿ

(3) ಆನಂದರಾಮ್ ವೃತ್ತದಲ್ಲಿ.

II) ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಕೆಳಕಂಡ ಮೇಲು ಸೇತುವೆಗಳು/ ಗ್ರೇಡ್ ಸೆಪರೇಟರ್‌ಗಳು ನಿರ್ಮಾಣದ ಹಂತದಲ್ಲಿರುತ್ತವೆ.

(1) ರಾಜಾಜಿನಗರ ಗ್ರೇಡ್ ಸೆಪರೇಟರ್.

(2) ಮೋದಿ ರಸ್ತೆ ಕಾರ್ಡ್ ರಸ್ತೆ ಗ್ರೇಡ್ ಸೆಪರೇಟರ್.

(3) ಬಾಣಸವಾಡಿ ರೈಲ್ವೆ ಮೇಲು ಸೇತುವೆ

(4) ಕಂಟೋನ್‌ಮೆಂಟ್ ರೈಲ್ವೆ ನಿಲ್ದಾಣದ ಬಳಿ ರೈಲ್ವೆ ಕೆಳ ಸೇತುವೆ.

(5) ನ್ಯಾಷನಲ್ ಕಾಲೇಜು ಮೇಲು ಸೇತುವೆ.

ಆ) ಬಂದಿದೆ.

ಇ) 1) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮೇಲು ಸೇತುವೆ ವ್ಯಾಪ್ತಿಯಲ್ಲಿನ ರಸ್ತೆಗಳ ನಿರ್ವಹಣೆಯನ್ನು ಕೈಗೊಂಡಿರುತ್ತದೆ.

2) ಬೆಂಗಳೂರು ಮಹಾನಗರ ಪಾಲಿಕೆಯು ವಾಹನಗಳು ಸುಗಮವಾಗಿ ಸಂಚರಿಸಲು ಪರ್ಯಾಯ ವ್ಯವಸ್ಥೆ ಮಾಡಿರುತ್ತದೆ.

ಈ) I) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾಹಿತಿ:

ಕ್ರಮ ಸಂಖ್ಯೆ	ವಿವರ	ನಿರ್ಮಾಣ ವೆಚ್ಚ
1	ಜಯದೇವ ಹೃದ್ರೋಗ ಕೇಂದ್ರದ ಬಳಿ ಮೇಲು ಸೇತುವೆ	ರೂ. 1757.00 ಲಕ್ಷಗಳು
2	ಏರ್‌ಪೋರ್ಟ್ ರಸ್ತೆ–ಒಳ ವರ್ತುಲ ರಸ್ತೆ ಕೊಡುವಿಕೆಯಲ್ಲಿ ಮೇಲು ಸೇತುವೆ	ರೂ. 2670.00 ಲಕ್ಷಗಳು
3	ಆನಂದರಾವ್ ವೃತ್ತದಲ್ಲಿ ಮೇಲು ಸೇತುವೆ	ರೂ. 2760.00 ಲಕ್ಷಗಳು

II) ಬೆಂಗಳೂರು ಮಹಾನಗರಪಾಲಿಕೆಯ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಾಣದ ಹಂತದಲ್ಲಿರುವ ಮೇಲು ಸೇತುವೆ /ಗ್ರೇಡ್ ಸೆಪರೇಟರ್‌ಗಳ ವಿವರಗಳು

ಕ್ರ.ಸಂ. 5ಕ್ಕೆ

ಕ್ರ. ಸಂ.	ಕೆಲಸದ ಹೆಸರು	ಅಂದಾಜು ಮೊತ್ತ ರೂ ಲಕ್ಷಗಳಲ್ಲಿ	ಟೆಂಡರ್ ಮೊತ್ತ ರೂ ಲಕ್ಷಗಳಲ್ಲಿ	ಕೆಲಸದ ಅಂತ್ಯದ ನಿಗದಿತ ದಿನಾಂಕ	ಇಲ್ಲಿಯವರೆಗಿನ ಭೌತಿಕ ಪ್ರಗತಿ	ಆರ್ಥಿಕ ಪ್ರಗತಿ ರೂ ಲಕ್ಷಗಳಲ್ಲಿ	ವಿಳಂಬಕ್ಕೆ ಕಾರಣ
1	2	3	4	5	6	7	8
1	ರಾಜಾಜಿನಗರ ಪ್ರವೇಶದ್ವಾರದ ಅಂಡರ್ ಪಾಸ್ ಹಾಗೂ ಅಪರ್‌ವೆನ್ಟ್ ಕಟ್ಟುವ ಕಾಮಗಾರಿ.	1440.00	1184.00	10/3/2005	65%	400.00	ಭೂ ಸ್ವಾಧೀನ ಪ್ರಕ್ರಿಯೆ ಹಾಗೂ ವಿದ್ಯುತ್, ಕುಡಿಯುವ ನೀರಿನ ಕೊಳವೆ ಹಾಗೂ ಒಳಚರಂಡಿ ವ್ಯವಸ್ಥೆ ಮಾರ್ಗಗಳನ್ನು ಬದಲಾಯಿಸಬೇಕಾಗಿ–ರುವುದರಿಂದ ವಿಳಂಬವಾಗಿದೆ.
2	ಮೋದಿ ಕಾರ್ಡ್ ರಸ್ತೆ ಕೂಡುವಿಕೆಯಲ್ಲಿ ಗ್ರೇಡ್ ಸೆಪರೇಟರ್ ನಿರ್ಮಾಣ	1500.00	972.00	21/8/2004	30%	200.00	ವಿದ್ಯುತ್, ಕುಡಿಯುವ ನೀರಿನ ಕೊಳವೆ ಹಾಗೂ ಒಳಚರಂಡಿ ವ್ಯವಸ್ಥೆ ಮಾರ್ಗಗಳನ್ನು ಬದಲಾಯಿ–ಸಬೇಕಾಗಿರುವುದರಿಂದ ವಿಳಂಬವಾಗಿದೆ.

1	2	3	4	5	6	7	8
3	ಬಾಣಸವಾಡಿಯಲ್ಲಿ ರೈಲ್ವೆ ಮೇಲು ಸೇತುವೆ ನಿರ್ಮಾಣ	800.00	791.00	10/4/2004	95%	335.00	ವಾಹನ ಸಂಚಾರಕ್ಕೆ ಬದಲಿ ವ್ಯವಸ್ಥೆಯಿಂದ
4	ಮಾಧವನಗರದಲ್ಲಿ ರೈಲ್ವೆ ಕೆಳ ಸೇತುವೆ ನಿರ್ಮಾಣ	218.75	225.00	11/4/2004	70%	218.75	ವಾಹನ ಸಂಚಾರಕ್ಕೆ ಬದಲಿ ವ್ಯವಸ್ಥೆಯಿಂದ
5	ಬೆಂಗಳೂರು ದಂಡು ರೈಲ್ವೇ ನಿಲ್ದಾಣದಲ್ಲಿ ರೈಲ್ವೇ ಕೆಳ ಸೇತುವೆ ನಿರ್ಮಾಣ	220.00	220.00	Nov. 2004	40%	165.00	ರೈಲ್ವೆ ಇಲಾಖೆ ಕಾಮಗಾರಿ ನಿರ್ವಹಿಸಬೇಕಾಗಿದ್ದು, ರೈಲ್ವೆ ಇಲಾಖೆಯಿಂದ ವಿಳಂಬವಾಗಿದೆ.
6	ನ್ಯಾಷನಲ್ ಕಾಲೇಜ್ ಬಳಿ ಮೇಲು ಸೇತುವೆ ನಿರ್ಮಾಣ	1100.00	799.45	2/12/2004	75%	452.74	ವಿದ್ಯುತ್, ಕುಡಿಯುವ ನೀರಿನ ಕೊಳವೆ ಹಾಗೂ ಒಳಚರಂಡಿ ವ್ಯವಸ್ಥೆ ಮಾರ್ಗಗಳನ್ನು ಬದಲಾಯಿಸಬೇಕಾಗಿರುವುದರಿಂದ ಹಾಗೂ ಮರಗಳನ್ನು ಕಡಿಯುವ ಅನುಮತಿ ಪಡೆಯಲು ವಿಳಂಬವಾಗಿರುತ್ತದೆ.